UASB Library
Newspaper Clippings
Monday 16-05-2022 Pg .1
Jai Kisan

ನಿ ರೈತ ಮಿತ್ರ

ನಮ್ಮ ರಾಜ್ಯದಲ್ಲಿ ಡ್ರ್ಯಾಗನ್ ಫ್ರೂಟ್ ಬೆಳೆಯಬಹುದೇ? ಬೆಳೆಯುವ ವಿಧಾನ ಹೇಗೆ?

ಡ್ರ್ಯಾಗನ್ ಸಮೃದ್ಧವಾದ ಪೋಷಕಾಂಶಗಳನ್ನು, ಔಷಧೀಯ ಗುಣಗಳನ್ನು ಹೊಂದಿದೆ. ವಿಶೇಷವಾಗಿ ಹಣ್ಣಿನ ತಿರುಳಿನಲ್ಲಿ ವಿಟಮಿನ್ ಸಿ ಅಂಶ ಹೆಚ್ಚಾಗಿದ್ದು, ಒಮೆಗಾ-3,6 (ಆರೋಗ್ಯಕ್ಕೆ ಹಾನಿ ತರದಂಥ ಕೊಬ್ಬಿನಾಂಶ) ಹೊಂದಿದ್ದು, ಪ್ರೋಟೀನ್, ಕ್ಯಾರೋಟೀನ್, ಕ್ಯಾಲ್ಸಿಯಂ, ಕಬ್ಬಿಣ ಮುಂತಾದ ಪೋಷಕಾಂಶಗಳನ್ನು ಹೊಂದಿದೆ. ಹೃದಯ ರಕ್ತನಾಳ ಕಾಯಿಲೆಗೆ ಈ ಹಣ್ಣು ರಾಮಬಾಣವಾಗಿದೆ. ನಮ್ಮ ರಾಜ್ಯದಲ್ಲಿ ಈ ಹಣ್ಣನ್ನು ಯಶಸ್ವಿಯಾಗಿ ಬೆಳೆಯಬಹುದಾಗಿದ್ದು, ಪ್ರಮುಖವಾಗಿ ಕೆಂಪು ಮತ್ತು ಬಿಳಿ ತಿರುಳಿನ ತಳಿಗಳಿದ್ದು, ತುಂಡುಗಳನ್ನು 1X5 ಮೀ. ಅಂತರದಲ್ಲಿ ನಾಟಿ ಮಾಡಿ ಕಲ್ಲು ಕಂಬಗಳ ಆಸರೆ ನೀಡಿ ಬೆಳೆಯಬಹುದು. ಮಧ್ಯಮದಿಂದ ಅಧಿಕ ಉಷ್ಣಾಂಶದಲ್ಲಿಯೂ ಈ ಬೆಳೆಯನ್ನು ಯಶಸ್ವಿಯಾಗಿ ಬೆಳೆಯಬಹುದಾಗಿದ್ದು, ಕಡಿಮೆ ನೀರನ್ನು ಬಯಸುವ ಬೆಳೆಯಾಗಿದೆ. ಎಕರೆಗೆ ಕನಿಷ್ಠ 5 ಟನ್ ಇಳುವರಿ ಪಡೆಯಬಹುದಾಗಿದ್ದು, ಮಾರುಕಟ್ಟೆ ದರವನ್ನಾಧರಿಸಿ ವಾರ್ಷಿಕ 10 ಲಕ್ಷ ರೂ. ತನಕ ಆದಾಯ ಪಡೆಯಬಹುದು.

ಡಾ. ಕೆ.ಪಿ.ರಘುಪ್ರಸಾದ್ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಬದನೆಯ ಸಸಿಗಳು ಮಡಿಯಲ್ಲಿ ಸಾಯುತ್ತಿವೆ, ಇದನ್ನು ನಿಯಂತ್ರಿಸುವುದು ಹೇಗೆ?

ರುದ್ರೇಶ ಹುನಗುಂದು ತಾಲೂಕು

ರೋಗಕ್ಕೆ ತುತ್ತಾದ ಗಿಡದ ಕಾಂಡವು ಕಪ್ಪು ಅಥವಾ ಕಂದು ಬಣ್ಣದಿಂದ ಕೂಡಿದ್ದು, ನಂತರ ಗಿಡಗಳು ಕುಸಿದು ನೆಲಕ್ಕೆ ಬೀಳುತ್ತವೆ. ಎರು ಸಸಿ ಮಡಿಗಳನ್ನು ತಯಾರಿಸಿ ಸಾಕಷ್ಟು ನೀರುಣಿಸಿ ಅದನ್ನು 400 - 500 ಗೇಜಿನ ಪಾರದರ್ಶಕ ಪಾಲಿಥೀನ್ ಪೇಪರಿನಿಂದ ಏಪ್ರಿಲ್ - ಮೇ ತಿಂಗಳಲ್ಲಿ 6 ವಾರಗಳ ಕಾಲ ಮುಚ್ಚಬೇಕು. ಆರು ವಾರಗಳ ನಂತರ ಬಿತ್ತನೆ ಮಾಡುವಾಗ ಪ್ರತಿ ಕಿ.ಗ್ರಾಂ ಬೀಜವನ್ನು 6 ಗ್ರಾಂ ಮೆಟಲಾಕ್ಸಿಲ್ ಎಂ.ಝಡ್.ನಿಂದ ಬೀಜೋಪಚಾರ ಮಾಡಬೇಕು. ತದನಂತರ ಪ್ರತಿ ಕಿ.ಗ್ರಾಂ ಬೀಜಕ್ಕೆ 4 ಗ್ರಾಂ ಟ್ರೈಕೋಡರ್ಮಾ ಜೀವಾಣುವಿನಿಂದ ಲೇಪಿಸಬೇಕು. ಇದರಿಂದಾಗಿ ಸಸಿಗಳು ರೋಗ ರಹಿತವಾಗಿ ಬೆಳೆಯುತ್ತವೆ.

ಬಿ. ಪ್ರಿಯಾಂಕ ಸಸ್ಯರೋಗ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ.

16-05-2022 Vv Pg 09

16-05-2022 Sk Pg 02

ಕೃಷಿ ಆದಾಯ ಹೆಚ್ಚಳಕ್ಕೆ ಸಚಿವರ ಸಲಹೆ

ಸಂ.ಕ. ಸಮಾಚಾರ ಯಲಹಂಕ

ರೈತರು ಕೇವಲ ಕೃಷಿಯಲ್ಲಿ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವತ್ತ ಗಮನಹರಿಸಿದರೆ ಸಾಲದು. ಕೃಷಿ ಉತ್ಪನ್ನಗಳಿಗೆ ಮೌಲ್ಯವರ್ಧನೆ ಮಾಡಿ ಹೆಚ್ಚಿನ ಆದಾಯ ಗಳಿಸುವತ್ತ ಗಮನವಹಿಸಬೇಕೆಂದು ಕೃಷಿ ಸಚಿವ ಬಿಸಿ ಪಾಟೀಲ್ ಹೇಳಿದರು.

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಕೃಷಿ ಮಾರಾಟ ಸಹಕಾರ ಮತ್ತು ಮತ್ತು ವ್ಯವಹಾರ ನಿರ್ವಹಣೆ ವಿಭಾಗದಲ್ಲಿ ಕೃಷಿ ಉದ್ಯಮ ನಾವೀನ್ಯತೆ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿಗಳ ಕನಸಿನ ಕೂಸಾದ ದ್ವಿತೀಯ ಕೃಷಿ , ಮಾಧ್ಯಮಿಕ ಕೃಷಿಯತ್ತ ಯೋಚಿಸಿ ಆಲೋಚಿಸಿ ಮುಂದುವರೆಯುವುದು ಅತ್ಯಂತ ಅವಶ್ಯಕ. ಇದರಿಂದ, ಮಧ್ಯವರ್ತಿಗಳ ಹಾವಳಿ ತಪ್ಪಿಸಿ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಲಗ್ಗೆಯಿಡಲು ಸಾಧ್ಯವಾಗುತ್ತದೆ ಎಂದರು.

ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಎಸ್. ರಾಜೇಂದ್ರ ಪ್ರಸಾದ್ ಮಾತನಾಡಿ ಕೃಷಿ ವಿದ್ಯಾರ್ಥಿಗಳು ಸರ್ಕಾರಿ ಉದ್ಯೋಗಕೋಸ್ಕರ ಕಾಯದೆ, ತಾವು ಪಡೆದ ಜ್ಞಾನ ಮತ್ತು ಕೌಶಲ್ಯವನ್ನು ಬಳಸಿಕೊಂಡು ಸ್ವಯಂ ಉದ್ಯೋಗಿಗಳಾಗಲು ಮುಂದಾಗಬೇಕು.

ಇತ್ತೀಚಿನ ದಿನಗಳಲ್ಲಿ ಸ್ವಯಂ ಉದ್ಯೋಗಿಗಳಾಗಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿರುತ್ತವೆ.

ಸಾಲದ ಸೌಕರ್ಯ ಮತ್ತು ಸಹಾಯ ಧನ ಸೌಕರ್ಯವಿರುತ್ತದೆ. ಆದುದರಿಂದ ವಿದ್ಯಾರ್ಥಿಗಳು ಅಗ್ರಿಕ್ಲಿನಿಕ್ ಮತ್ತು ಅಗ್ರಿಬಿಸಿನೆಸ್ ಕೋರ್ಸ್‌ಗೆ ನೊಂದಣಿ ಮಾಡಿಕೊಂಡು ಕೃಷಿಯಲ್ಲಿ ನೂತನ ಆವಿಷ್ಕಾರಗಳು, ವ್ಯವಹಾರ ಜ್ಞಾನ, ಮಾರುಕಟ್ಟೆ ಕೌಶಲ್ಯ ಹಣಕಾಸು ಸಂಸ್ಥೆಗಳಿಂದ ಧನ ಸಹಾಯ ಪಡೆಯಲು ಯೋಜನೆ ತಯಾರಿಕೆ ಮುಂತಾದ ಕೌಶಲ್ಯಗಳನ್ನು ಪಡೆದು ಸ್ವಂತ ಉದ್ಯಮ ಪ್ರಾರಂಭಿಸಿ ಸ್ಥಳೀಯ ಮಟ್ಟದಲ್ಲಿ ಉದ್ಯೋಗವನ್ನು ಕಲ್ಪಿಸಿ ಇತರರಿಗೆ ಮಾರ್ಗದರ್ಶಿಗಳಾಗಬೇಕೆಂದು ತಿಳಿಸಿದರು.



ಕೃಷಿ ಉದ್ಯಮ ನಾವೀನ್ಯತೆ ದಿನಾಚರಣೆ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ ಅವಿಷ್ಕರಿಸಿದ ಯಂತ್ರೋಪಕರಣಗಳನ್ನು ಕೃಷಿ ಸಚಿವ ಬಿಸಿ ಪಾಟೀಲ್, ಕುಲಪತಿಗಳಾದ ಡಾ॥ ಎಸ್. ರಾಜೇಂದ್ರ ಪ್ರಸಾದ್ ಮತ್ತಿತರರು ವೀಕ್ಷಿಸಿದರು.

ದಿನಾಚರಣೆ ಕಾರ್ಯಕ್ರಮದಲ್ಲಿ ಅಂತಿಮ ವರ್ಷದ ವಿದ್ಯಾರ್ಥಿಗಳ ಜ್ಞಾನ, ಕೌಶಲ್ಯ ಮತ್ತು ವ್ಯವಹಾರ ಪ್ರೌಡಿಮೆಯನ್ನು ಪ್ರದರ್ಶಿಸಲು ವೇದಿಕೆಯನ್ನು ಕಲ್ಪಿಸಲಾಗಿತ್ತು

ಕಾರ್ಯಕ್ರಮದಲ್ಲಿ ಕುಲಸಚಿವ ಡಾ: ಬಸವೇಗೌಡ, ಡೀನ್ ಡಾ: ಎನ್.ಬಿ. ಪ್ರಕಾಶ್, ಪ್ರಾಧ್ಯಾಪಕ ಡಾ: ಎಂ.ಎಸ್. ಗಣಪತಿ ಮತ್ತಿತರರು ಉಪಸ್ಥಿತರಿದ್ದರು.

ಕರ್ನಾಟಕದಲ್ಲಿ ಆ್ಯಪಲ್ ಕೃಷಿ ಕ್ರಾಂತಿ



ಸಿಇಒ, ಸಂಸ್ಥಾಪಕರು ಇಂಡಿಯನ್‌ಮನಿ.ಕಾಂ
ವೆಬ್‌ಸೈಟ್: www.indianmoney.com

ಕರ್ನಾಟಕದ ಕೃಷಿ ಕ್ಷೇತ್ರ ದಿನೇದಿನೆ ಶ್ರೀಮಂತಿಕೆ ಪಥದಲ್ಲಿ ಸಾಗುತ್ತಿದೆ. ಈ ನೆಲದಲ್ಲಿ ಮರಳುಗಾಡಿನ ಖರ್ಜೂರ, ಮೆಕ್ಸಿಕೋದ ಬಟರ್ ಫ್ರೂಟ್ ಈಗಾಗಲೇ ಸದ್ದು ಮಾಡಿವೆ. ಅದರ ಬೆನ್ನಲ್ಲೇ ಜನತೆಯ ಮನದಲ್ಲಿ ಮೋಡ ಮುಸುಕಿರುವ ತಾಣದ ಬೆಳೆ ಎಂದೇ ಅಚ್ಚೊತ್ತಿದಂತಿರುವ ಸೇಬು ಹೊಸ ಸಾಧ್ಯತೆ ತೆರೆದಿಟ್ಟಿದೆ. ಇದೀಗ ಕರ್ನಾಟಕದ ಹೇರಳ ಬಿಸಿಲಿರುವ ತಾಣದಲ್ಲೇ ಭರವಸೆಯ ಬೆಳೆಯಾಗಿದೆ. ಆ್ಯಪಲ್, ರೈನ್ ಶ್ಯಾಡೋದಂಥ ಏರಿಯಾಗಳಲ್ಲಿ ಯಶೋಗಾಥೆ ಬರೆದದ್ದಷ್ಟೇ ಅಲ್ಲ, ಬದಲಿಗೆ ಎಕರೆಗೆ ಕನಿಷ್ಠ ಅಂದ್ರು 9 ಲಕ್ಷ ರೂ. ಆದಾಯ ತಂದುಕೊಡುತ್ತಿದೆ. ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಜ್ಯೋತಿ ಪ್ರಕಾಶ್ ಎಂಬ ರೈತರು ಇದಕ್ಕೆ ಅತ್ಯುತ್ತಮ ಉದಾಹರಣೆ. ಅವರ 1 ಎಕರೆಯಲ್ಲಿ 320 ಗಿಡವಿದ್ದು ಎಲ್ಲವೂ ಫಲ ನೀಡುತ್ತಿದೆ. ಒಂದೊಂದು ಗಿಡವೂ ಕನಿಷ್ಠ 60 ಕೆ.ಜಿ. ಇಳುವರಿ ನೀಡುತ್ತಿದೆ. 1 ಗಿಡ 60 ಕೆ.ಜಿ ಅಂದ್ರೆ 320 ಗಿಡಕ್ಕೆ 19 ಟನ್ 2 ಕ್ವಿಂಟಾಲ್ ಹಣ್ಣಿನ ಇಳುವರಿ ಸಿಕ್ಕಂತಾಯಿತು. 1 ಕೆ.ಜಿ. ಆ್ಯಪಲ್‌ಗೆ 200 ರೂ.ವರೆಗೆ ಬೆಲೆ ಬಂದ ಉದಾಹರಣೆ ಇದೆ. ಆದರೆ, ನಾವು ಅತಿ ಕನಿಷ್ಠ ಲೆಕ್ಕಾಚಾರ ಇಟ್ಟುಕೊಂಡು ಕೆ.ಜಿ.ಗೆ 50 ರೂ. ಅಂದರೂ 19 ಟನ್ 2 ಕ್ವಿಂಟಾಲ್‌ಗೆ 9.60 ಲಕ್ಷ ರೂ. ಆದಾಯ ಬರುತ್ತದೆ. ಒಂದು ವೇಳೆ ಗಿಡದಲ್ಲಿ 80 ಕೆ.ಜಿ. ಇಳುವರಿ ಸಿಕ್ಕಿ 100 ರೂ. ದರ ಸಿಕ್ಕರೆ 25 ಟನ್ 6 ಕ್ವಿಂಟಾಲ್ ಇಳುವರಿಗೆ 25,60,000 ರೂ. ಆದಾಯ ಸಿಗುತ್ತದೆ. ಕೆ.ಜಿ.ಗೆ 50 ರೂ. ಲೆಕ್ಕಾಚಾರದಲ್ಲೇ ವರ್ಷಕ್ಕೆ 9 ಲಕ್ಷ ರೂ. ಅಂದರೆ, ಸೇಬಿನ 40 ವರ್ಷ (50- 60 ವರ್ಷ ಸೇಬಿನ ಮರದ ಜೀವೀತಾವಧಿಯಾಗಿರುತ್ತದೆ) ಜೀವಿತಾವಧಿಯಲ್ಲಿ 34 ವರ್ಷ ನಿರಂತರ ಇಳುವರಿ ಸಿಗುತ್ತದೆ. ಒಂದು ಎಕರೆಯಲ್ಲಿ 34 ವರ್ಷಕ್ಕೆ 3 ಕೋಟಿ 6 ಲಕ್ಷ ರೂ. ಆದಾಯ ಗಳಿಸಬಹುದು. ಹೂಡಿದ ಬಂಡವಾಳ ಕೇವಲ 1 ಲಕ್ಷ ರೂ. ಆದರೆ ಗಿಡಗಳ ಜೀವಿತಾವಧಿಯಲ್ಲಿ ಎಕರೆಗೆ ಕನಿಷ್ಠ ಅಂದರೂ 3 ಕೋಟಿ ರೂ. ಪಡೆಯುತ್ತೇವೆ. ಊಹಿಸಿ ನೋಡಿ ಒಮ್ಮೆ ಕಷ್ಟಪಟ್ಟರೆ ಒಂದೆರಡು ತಲೆಮಾರುಗಳೇ ಅತ್ಯುತ್ತಮ ಬದುಕು ಕಾಣುವ ಅವಕಾಶ ಸೇಬಿನ ಕೃಷಿಯಲ್ಲಿದೆಯಲ್ವಾ?



ಸುಡುವ ಬಿಸಿಲಲ್ಲಿ ಸೇಬು ಕೃಷಿ ಹೇಗೆ ಸಾಧ್ಯ?: ನಮ್ಮ ಭಾರತದಲ್ಲಿ 1,600 ಸೇಬು ತಳಿಗಳಿವೆ. ಅವೆಲ್ಲವು ಕಾಶ್ಮೀರ, ಶಿಮ್ಲಾ, ಹಿಮಾಚಲ ಪ್ರದೇಶದಂತಹ ಮಂಜಿನ ಹನಿಗಳ ತಾಣಕ್ಕೆ ಸೂಕ್ತವಾದಂತವು. ಆದರೆ, ಉಳಿದ ಉಷ್ಣವಲಯಕ್ಕಾಗಿಯೇ ನಮ್ಮ ದೇಶದಲ್ಲಿ 3 ಹೊಸ ತಳಿಯ ಅನ್ವೇಷಣೆಯಾಗಿದೆ. ಕಾಡು ಗಿಡಕ್ಕೆ ಸೇಬನ್ನು ಕಸಿ ಮಾಡಿ ಉಷ್ಣವಲಯಗಳಲ್ಲಿ ಸಲೀಸಾಗಿ ಬೆಳೆಯುವಂತೆ ಮಾಡಲಾಗಿದೆ. ಈ ಕಾರಣದಿಂದಲೇ ಇಂದು ಚಿತ್ರದುರ್ಗದಂತಹ ಹೆಚ್ಚು ಬಿಸಿಲಿರುವ ಪ್ರದೇಶದಲ್ಲಿ ನಿಬ್ಬೆರಗಾಗುವ ಆ್ಯಪಲ್ ಕೃಷಿ ಕ್ರಾಂತಿ ನಡೆದಿದೆ.

ಭಾರತದಲ್ಲಿ ಆ್ಯಪಲ್ ಕೃಷಿ: ಜಮ್ಮು ಮತ್ತು ಕಾಶ್ಮೀರವು ಭಾರತದಲ್ಲಿ ಅತಿ ಹೆಚ್ಚು ಸೇಬು ಬೆಳೆಯುವ ರಾಜ್ಯವೆಂದು ಗುರುತಿಸಿಕೊಂಡಿದೆ. ಶೇ.60 ಉತ್ಪಾದನೆ ಜಮ್ಮು ಮತ್ತು ಕಾಶ್ಮೀರ ಮಾಡುತ್ತಿದೆ. ಜಮ್ಮುವಿನ ಬರಮುಲ್ಲ ಜಿಲ್ಲೆ ಅತಿಹೆಚ್ಚು ಆ್ಯಪಲ್ ಬೆಳೆಯುವ ಪ್ರದೇಶ. ಜಮ್ಮು ಮತ್ತು ಕಾಶ್ಮೀರದ ನಂತರ ಹಿಮಾಚಲ ಪ್ರದೇಶ, ಉತ್ತರಾಖಂಡ 2 ಮತ್ತು 3ನೇ ಸ್ಥಾನದಲ್ಲಿದೆ. ಜಗತ್ತಿನಲ್ಲಿ ಚೀನಾ ಅತಿಹೆಚ್ಚು ಆ್ಯಪಲ್ ಬೆಳೆಯುವ ರಾಷ್ಟ್ರವೆಂದು ಗುರುತಿಸಿಕೊಂಡಿದೆ. ಯುಎಸ್‌ಎ ಎರಡನೇ ಸ್ಥಾನದಲ್ಲಿದ್ದು, ಭಾರತ 5 ನೇ ಸ್ಥಾನದಲ್ಲಿದೆ. ಇದೀಗ ಉಷ್ಣವಲಯದ ಆ್ಯಪಲ್ ಅತ್ಯದ್ಭುತವಾಗಿ ಭರವಸೆ ಮೂಡಿಸುತ್ತಿರುವುದರಿಂದ ಮುಂದಣ ದಿನಗಳಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿವರೆಗೂ ಎಲ್ಲೆಲ್ಲೂ ಆ್ಯಪಲ್ ಕೃಷಿ ವಿಸ್ತಾರವಾದರೆ ಭಾರತ ವಿಶ್ವದ ಮೊದಲನೇ ಸ್ಥಾನದಲ್ಲಿರಲು ಸಾಧ್ಯವಿಲ್ಲವೆ?

ಜಾಗತಿಕ ಮಟ್ಟದಲ್ಲಿ: ಸೇಬು, 78 ಬಿಲಿಯನ್ ಡಾಲರ್ಸ್ ಗ್ಲೋಬಲ್ ಮಾರ್ಕೆಟ್ ರೇಶ್ಯೂ ಪಡೆದುಕೊಂಡಿದೆ. ಅಂದರೆ ನಮ್ಮ ಭಾರತೀಯ ಕರೆನ್ಸಿ ಪ್ರಕಾರ ಇದು 5 ಲಕ್ಷದ 85 ಸಾವಿರ ಕೋಟಿ ರೂ. ನಷ್ಟಾಗುತ್ತದೆ. ಜತೆಗೆ ಪ್ರಪಂಚದಲ್ಲಿ 8 ಕೋಟಿ 72 ಲಕ್ಷದ 36 ಸಾವಿರದ 221 ಟನ್ ಆ್ಯಪಲ್ ಬೆಳೆಯಲಾಗುತ್ತೆ. ಅದರಲ್ಲಿ ದೊಡ್ಡ ಪಾಲು ಪಡೆದುಕೊಂಡಿರುವ ಚೀನಾ 4 ಕೋಟಿ 24 ಲಕ್ಷದ 26 ಸಾವಿರದ 578 ಟನ್‌ನಷ್ಟು ಆ್ಯಪಲ್ ಬೆಳೆಯುತ್ತದೆ. 2 ನೇ ಸ್ಥಾನದಲ್ಲಿರುವ ಯುಎಸ್‌ಎ 49 ಲಕ್ಷದ 97 ಸಾವಿರದ 680 ಟನ್‌ನಷ್ಟು ಉತ್ಪಾದನೆ ಮಾಡುತ್ತಿದೆ. ಈ ಎರಡು ದೇಶಗಳೇ ಪ್ರಪಂಚಕ್ಕೆ ಶೇ.50 ಆ್ಯಪಲ್ ಪ್ರೊಡಕ್ಷನ್ ಮಾಡುತ್ತಿವೆ. ನಮ್ಮ ಭಾರತದಲ್ಲಿ 23 ಲಕ್ಷದ 16 ಸಾವಿರ ಟನ್‌ನಷ್ಟೇ ಆ್ಯಪಲ್ ಬೆಳೆಯಲಾಗ್ತಿದೆ. ಹೀಗಾಗಿ ಭಾರತೀಯ ರೈತರಿಗೆ ತುಂಬಾ ದೊಡ್ಡ ಅವಕಾಶವಿದೆ.

ಆ್ಯಪ್‌ನಲ್ಲಿ ಆ್ಯಪಲ್ ಕೃಷಿ ಕೋರ್ಸ್: ರೈತಾಪಿ ವರ್ಗದ ವರ ಆರ್ಥಿಕ ಪ್ರಗತಿ ದೃಷ್ಟಿಯಿಂದ ಇಂಡಿಯನ್ ಮನಿ ಡಾಟ್ ಕಾಂನ ಫ್ರೀಡಂ ಆ್ಯಪ್ ಆ್ಯಪಲ್ ಕೃಷಿ ಕೋರ್ಸ್ ಅನಾವರಣ ಮಾಡಿದೆ. ಅಸಾಧ್ಯತೆ ಅನ್ನಿಸಿಕೊಂಡ ತಾಣದಲ್ಲೇ ಸಾಧ್ಯತೆಗಳನ್ನು ಹುಡುಕಿಆ್ಯಪಲ್ ಕೃಷಿಯಲ್ಲಿ ಯಶೋಗಾಥೆ ಬರೆದ ಚಿತ್ರದುರ್ಗ ಜಿಲ್ಲೆಯ ಜ್ಯೋತಿ ಪ್ರಕಾಶ್ ಈ ಕೋರ್ಸ್ ಮಾರ್ಗದರ್ಶಕರು.

ಕೋರ್ಸ್‌ನಲ್ಲಿ ಏನೇನಿದೆ?

- ಕೋರ್ಸ್ ಪರಿಚಯ
- ಮಾರ್ಗದರ್ಶಕರ ಪರಿಚಯ
- ಏನಿದು ಆ್ಯಪಲ್ ಕೃಷಿ?
- ಬಂಡವಾಳ ಮತ್ತು ಸರ್ಕಾರದ ಸೌಲಭ್ಯ
- ಅಗತ್ಯಭೂಮಿ, ಮಣ್ಣು ಮತ್ತು ಹವಾಮಾನ
- ಸೇಬು ತಳಿ
- ಭೂಮಿ ಸಿದ್ಧತೆ ಮತ್ತು ನಾಟಿ ಪ್ರಕ್ರಿಯೆ
- ನೀರು, ಗೊಬ್ಬರ ಮತ್ತು ಕಾರ್ಮಿಕರು
- ರೋಗ ನಿಯಂತ್ರಣ
- ಕಟಾವು ಮತ್ತು ಶೇಖರಣೆ
- ಮಾರುಕಟ್ಟೆ ಮತ್ತು ರಫ್ತು
- ಇಳುವರಿ, ಖರ್ಚು ಮತ್ತು ಲಾಭ
- ಸವಾಲು ಮತ್ತು ಕಿವಿಮಾತು.

ಉದ್ಯೋಗಾವಕಾಶಗಳು

ಮನೆಯಿಂದಲೇ ಉದ್ಯೋಗ ಮಾಡಬಯಸುವವರಿಗೆ ಇಂಡಿಯನ್ ಮನಿ ಡಾಟ್ ಕಾಂನಲ್ಲಿ ಸುವರ್ಣ ಅವಕಾಶವಿದೆ. ಉದ್ಯೋಗಾಕಾಂಕ್ಷಿಗಳು ಈ ನಂಬರಿಗೆ ಮಿಸ್ಡ್ ಕಾಲ್ ಮಾಡಿ. ದೂರವಾಣಿ ಸಂಖ್ಯೆ: 02262116777.

ಆನ್‌ಲೈನ್ ಮೇಕಪ್ ಆರ್ಟಿಸ್ಟ್ ಕೋರ್ಸ್‌ಗೆ ಈಗಲೇ ಸೇರಿ!

ಕನ್ನಡದ ನಟಿ ಮತ್ತು ಸೆಲೆಬ್ರಿಟಿ ಮೇಕಪ್ ಆರ್ಟಿಸ್ಟ್ ವೈಭವಿ ಜಗದೀಶ್ ಇಂಡಿಯನ್ ಮನಿ ಡಾಟ್ ಕಾಂನ ಫ್ರೀಡಂ ಆ್ಯಪ್ ಸಹಯೋಗದಲ್ಲಿ ನಡೆಸುತ್ತಿರುವ ಆನ್‌ಲೈನ್ ಮೇಕಪ್ ಆರ್ಟಿಸ್ಟ್ ಕೋರ್ಸ್‌ಗೆ ಈಗಲೇ ಸೇರಿಕೊಳ್ಳಿ. ನೀವು ಮೇಕಪ್ ಕಲೆ ಕಲಿತು ದುಡಿಮೆಯ ದಾರಿ ಕಂಡುಕೊಳ್ಳಿ. ವಿವರಕ್ಕೆ ದೂರವಾಣಿ ಸಂಖ್ಯೆ 96327 42525 ಸಂಪರ್ಕಿಸಿ.

ಜಮೀನು ಮಾರಿದವರಿಗೆ ಪಿಎಂ ಕಿಸಾನ್ ಹಣ ಕಟ್

ಕೃಷಿ ಭೂಮಿ ಮಾರಿದ ಮೇಲೂ ಹಣ ಪಡೆಯುತ್ತಿದ್ದ 1.5 ಲಕ್ಷ ಜನ | ಅನರ್ಹರ ಪತ್ತೆಹಚ್ಚಿದ ಕೃಷಿ ಇಲಾಖೆ | ಹಣ ವಾಪಸ್ ಪಡೆಯಲು ಕ್ರಮ

• ಸಿದ್ದು ಚಿಕ್ಕಬಳ್ಳೇಕೆರೆ
ಕನ್ನಡಪ್ರಭ ವಾರ್ತೆ ಬೆಂಗಳೂರು

ಬೇರೆಯವರಿಗೆ ಜಮೀನು ಮಾರಾಟ ಮಾಡಿದ್ದರೂ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ ಅಕ್ರಮವಾಗಿ ಅನುದಾನ ಪಡೆಯುತ್ತಿದ್ದ ಸುಮಾರು 1.50 ಲಕ್ಷ ರೈತರನ್ನು ಕೃಷಿ ಇಲಾಖೆ ಪತ್ತೆ ಮಾಡಿದ್ದು, ಅನುದಾನ ನಿಲ್ಲಿಸಲಾಗಿದೆ. ಜತೆಗೆ ಮೃತಪಟ್ಟ 200ಕ್ಕೂ ಅಧಿಕ ರೈತರಿಗೆ ಪಾವತಿಯಾಗುತ್ತಿದ್ದ ಅನುದಾನದ ಹಣಕ್ಕೆತಡೆ ಹಾಕಿದ್ದು, ಈವರೆಗೆ ಸಂದಾಯವಾಗಿರುವ ಮೊತ್ತದ ವಸೂಲಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ 53 ಲಕ್ಷಕ್ಕೂ ಅಧಿಕ ರೈತರು ಪಿಎಂ ಕಿಸಾನ್ ಯೋಜನೆಯ ಲಾಭ ಪಡೆಯುತ್ತಿದ್ದಾರೆ. ಆದಾಯ ತೆರಿಗೆ ಪಾವತಿಸುವವರೂ ಸೇರಿದಂತೆ ಅನರ್ಹರಿಗೆ ಹಣ ಪಾವತಿ ಆಗುವುದನ್ನು ತಪ್ಪಿಸಲು ಕೇಂದ್ರ ಸರ್ಕಾರದ ಸೂಚನೆ ನೀಡಿತ್ತು. ಆದರಂತೆ ರಾಜ್ಯಗಳೂ ತಮ್ಮಲ್ಲಿರುವ ಭೂಮಿ ತಂತ್ರಾಂಶ, ಫ್ರೂಟ್ ಐಡಿ ಮತ್ತಿತರ ದತ್ತಾಂಶ ಆಧರಿಸಿ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಸುಮಾರು 1.50 ಲಕ್ಷ ಜನರು ತಮ್ಮ ಜಮೀನು ಮಾರಾಟ ಮಾಡಿದ್ದರೂ ಅನುದಾನ ಪಡೆಯುತ್ತಿರುವುದು ಪತ್ತೆಯಾಗಿದೆ.

ಯೋಜನೆ ಜಾರಿಗೆ ಬಂದ ಸಮಯದಲ್ಲಿ ಫಲಾನುಭವಿಯಾಗಿದ್ದವರು ಬಳಿಕ 'ಫ್ರೂಟ್ ಐಡಿ'ಯಲ್ಲಿ ನೋಂದಾಯಿಸಿದ್ದ ಜಮೀನನ್ನು ಮಾರಾಟ ಮಾಡಿರುವುದು ಪತ್ತೆಯಾದ ನಂತರ ಅನುದಾನವನ್ನು ಇದೀಗ ನಿಲ್ಲಿಸಲಾಗಿದೆ. ಆದರೆ ಇಂತಹ ಜಮೀನು ಖರೀದಿಸಿದವರು ಮಾರ್ಗಸೂಚಿ ಪ್ರಕಾರ ಯೋಜನೆಯಡಿ ಹೊಸದಾಗಿ ಫಲಾನುಭವಿಗಳಾಗಲು ಅವಕಾಶವಿಲ್ಲ.

ವರ್ಷಕ್ಕೆ 10 ಸಾವಿರ ರು: ಫೆಬ್ರವರಿ 2019 ರಿಂದ ಕಿಸಾನ್ ಸಮ್ಮಾನ್ ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದ್ದು 4 ತಿಂಗಳಿಗೊಮ್ಮೆ ತಲಾ 2 ಸಾವಿರ ರು.ನಂತೆ ವರ್ಷಕ್ಕೆ 6 ಸಾವಿರ ರು. ನೀಡುತ್ತಿದೆ. ರಾಜ್ಯ ಸರ್ಕಾರ ವರ್ಷಕ್ಕೆ 4 ಸಾವಿರ ರು. ನೀಡುತ್ತಿದ್ದು ಒಟ್ಟಾರೆ ವರ್ಷಕ್ಕೆ 10 ಸಾವಿರ ರು. ಪಾವತಿಸಲಾಗುತ್ತಿದೆ. ಸಣ್ಣ-ದೊಡ್ಡ ರೈತರೆಂದು ತಾರತಮ್ಯ ಮಾಡದೇ ಜಮೀನು ಹಿಡುವಳಿ ಹೊಂದಿರುವ ಎಲ್ಲ ರೈತರಿಗೂ ಆನುದಾನ ನೀಡಲಾಗುತ್ತಿದೆ.



ಬ್ಯಾಂಕ್‌ಗಳಿಂದ ಮರಣ ಮಾಹಿತಿ

ರಾಜ್ಯದಲ್ಲಿ 200ಕ್ಕೂ ಅಧಿಕ ರೈತರು ಮೃತಪಟ್ಟ ನಂತರವೂ ಬ್ಯಾಂಕ್ ಖಾತೆಗೆ ನೇರವಾಗಿ ಹಣ ಪಾವತಿಯಾಗಿದೆ. ಸಂಬಂಧಪಟ್ಟವರಿಂದ ಮೊತ್ತ ವಸೂಲು ಮಾಡುವಂತೆ ಬ್ಯಾಂಕ್‌ಗಳಿಗೆ ಸೂಚನೆ ನೀಡಲಾಗಿದೆ. ಈಗಾಗಲೇ ಕೆಲವು ಮೃತ ರೈತರ ಕುಟುಂಬದಿಂದ 84 ಸಾವಿರ ರು. ವಾಪಸ್ ಪಡೆಯಲಾಗಿದೆ ಎಂದು ಕೃಷಿ ಇಲಾಖೆ ಮೂಲಗಳು ತಿಳಿಸಿವೆ.

ಪಿಎಂ ಕಿಸಾನ್ ಯೋಜನೆಯ ಫಲಾನುಭವಿಗಳಾಗಿದ್ದು ಬಳಿಕ ಜಮೀನು ಮಾರಾಟ ಮಾಡಿದ 1.5 ಲಕ್ಷ ಪ್ರಕರಣಗಳು ರಾಜ್ಯದಲ್ಲಿ ಪತ್ತೆಯಾಗಿದ್ದು ಇವರಿಗೆ ಹಣ ಸಂದಾಯ ಆಗುವುದನ್ನು ನಿಲ್ಲಿಸಲಾಗಿದೆ. ಮೃತಪಟ್ಟವರ ಬ್ಯಾಂಕ್ ಖಾತೆಗೂ ಹಣ ಪಾವತಿ ಆಗುತ್ತಿರುವುದನ್ನು ತಡೆ ಹಿಡಿಯಲು ಕ್ರಮ ಕೈಗೊಳ್ಳಲಾಗುತ್ತಿದೆ.

• ಬ್ರಿಜೇಶ್ ಕುಮಾರ್ ದೀಕ್ಷಿತ್ ಕೃಷಿ ಇಲಾಖೆ ಆಯುಕ್ತ

16-05-2022 Kp Pg 08

For more information visit
University Library Website
Web - uasbagrilibindia.org
E-mail- librarian@uasbangalore.edu.in

16-05-2022 Hd Pg 02

ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡುವ ಛಲ | ಸಾವಯವ ಕೃಷಿಗೆ ಮುಂದಾದ ದೀಪ್ತಿ

ನೌಕರಿ ತೊರೆದು ಕೃಷಿಕಳಾದಳು!

• ವೆಂಕಟೇಶ ದೇಸಾಯಿ

ಬಳ್ಳಾರಿ: ಉನ್ನತ ಶಿಕ್ಷಣ ಪಡೆದು ಮಹಾನಗರದಲ್ಲಿ ಕೆಲಸಕ್ಕೆ ಸೇರಿ ನಮ್ಮ ಉದ್ದೇಶ ಈಡೇರಿತು ಎನ್ನುವ ಭಾವನೆ ಬಹುತೇಕ ಜನರದ್ದಾಗಿದೆ. ಆದರೆ, ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನ ಅಡವಿ ಆನಂದದೇವನಹಳ್ಳಿ ಗ್ರಾಮದ ದೀಪ್ತಿ ಇದಕ್ಕೆ ತದ್ವಿರುದ್ಧವಾಗಿದ್ದಾರೆ.

ಎಂಬಿಎ, ಬಿಇ ಉನ್ನತ ಶಿಕ್ಷಣ ಪೂರ್ಣಗೊಳಿಸಿ ಓದಿನ ತಕ್ಕಂತೆ ಅರೆಗುತ್ತಿಗೆ ಆಧಾರದ ಮೇಲೆ ಪಂಚಾಯತ್ ರಾಜ್ ಇಲಾಖೆಯಲ್ಲಿ ಜೆಇ ಉದ್ಯೋಗ ದೊರೆತರೂ ಅದನ್ನು ತೊರೆದು ಕೃಷಿ ಕ್ಷೇತ್ರದಲ್ಲಿ ಸಾಧನೆ ಮುಂದಾಗುವ ಮೂಲಕ ಗಮನ ಸೆಳೆದಿದ್ದಾರೆ.

ಕಷ್ಟಪಟ್ಟು ಉನ್ನತ ಶಿಕ್ಷಣ ಪಡೆದು ನಗರ ಕೇಂದ್ರದಲ್ಲಿ ಬದಕನ್ನು ಕಟ್ಟಿಕೊಂಡು ನೆಮ್ಮದಿಯಿಂದ ಜೀವನ ಮಾಡುವ ವಯಸ್ಸಿನಲ್ಲಿ, ಸಾಕಷ್ಟು ಅವಕಾಶಗಳಿದ್ದರೂ ಎಲ್ಲವನ್ನೂ ತೊರೆದು ಕೃಷಿ ಕ್ಷೇತ್ರದಲ್ಲೇ ಸಾಧನೆ ಮಾಡಬೇಕು ಎಂದು ಯುವತಿ ದೀಪ್ತಿ ಬಾಲಕೋಟೇಶ್ವರ ರಾವ್ ನಿಶ್ಚಯಿಸಿದ್ದಾರೆ.

ಸಾವಯವ ಕೃಷಿ: ಪದವೀಧರೆ ದೀಪ್ತಿ ಅವರು ಸಾಕಷ್ಟು ಉದ್ಯೋಗ ಅವಕಾಶಗಳಿದ್ದರೂ ಸಾವಯವ ಕೃಷಿ ಚಟುವಟಿಕೆಯಲ್ಲಿ ಸಾಧನೆ ಮಾಡಬೇಕು ಎಂದು ನಿಶ್ಚಯಿಸಿದ್ದಾರೆ. ಪ್ರಾರಂಭದಲ್ಲಿ 20ಎಕರೆ ಜಮೀನಿನಲ್ಲಿ ದಾಳಿಂಬೆ ಬೆಳೆದು ಸಾಕಷ್ಟು ನಷ್ಟ ಅನುಭವಿಸಿದ್ದರು.

ಇದರಿಂದ ವಿಚಲಿತರಾಗದೇ ಕೃಷಿಯಲ್ಲೇ ಸಾಧನೆ ನನ್ನದು ಎನ್ನುವ ಮೂಲಕ, ನೆರಳೆ, ಪೇರಲ, ಮೋಸಂಬಿ ಬೆಳೆಯುವ ಮೂಲಕ ಎಲ್ಲರ ಗಮನ ಸೆಳೆದಿದ್ದಾರೆ. ಇದರ ಜೊತೆಗೆ ತಮ್ಮ ಜಮೀನಲ್ಲೇ ಮೂರು ದೊಡ್ಡ ಗಾತ್ರದ ಕೃಷಿ ಹೊಂಡ ನಿರ್ಮಿಸಿ ಕೊಳವೆ ಬಾವಿಗಳ ಅಂತರ್ಜಲ ಹೆಚ್ಚಿಸುವ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ. ವಿಶೇಷವೆಂದರೇ ಅದರಲ್ಲೇ ಮೀನು ಸಾಕಣಿಕೆ ಮಾಡಿ, ಲಕ್ಷಾಂತರ ರೂ.ಆದಾಯ ಕಂಡುಕೊಂಡಿದ್ದಾರೆ. ಇದರ ಜೊತೆಗೆ ಜೇನು ಸಾಕಾಣಿಕೆ ಮುಂದುವರೆಸಿದ್ದು, ನಿತ್ಯ ನೂರಾರು ಜನರು ತೋಟಕ್ಕೆ ಭೇಟಿ ನೀಡಿ ಮಾಹಿತಿ ಪಡೆಯಲು ಮುಂದಾಗಿದ್ದಾರೆ.



ಸಾಧನೆಗೆ ಇಂತಹದ್ದೇ ಎನ್ನುವುದು ಬೇಕಿಲ್ಲ, ನಾವು ಯಾವುದೇ ಕೆಲಸ ಮಾಡಿದರೂ ಅದರಲ್ಲಿ ಶ್ರದ್ಧೆ, ಪ್ರಾಮಾಣಿಕತೆ ಇದ್ದರೇ ಖಂಡಿತ ಯಶಸ್ಸು ದೊರೆಯಲಿದೆ. ವಿದ್ಯಾವಂತ ಯುವಕ, ಯುವತಿಯರು ಉದ್ಯೋಗಕ್ಕಾಗಿ ಅಲೆದಾಟ ಮುಂದುವರಿದಿದೆ. ಕೃಷಿ ಕಡೆಗೆ ಮುಖ ಮಾಡಲು ಸರ್ಕಾರ ಇನ್ನೂ ಹೆಚ್ಚು ಪ್ರೋತ್ಸಾಹ ನೀಡಿದರೇ ಅನುಕೂಲವಾಗಲಿದೆ. ರೈತರು ಬೆಳೆದ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ರೂಪಿಸಬೇಕು.
■ ದೀಪ್ತಿ, ಕೃಷಿಕರು ಹಗರಿಬೊಮ್ಮನಹಳ್ಳಿ

ದೇಶಿ ತಳಿ ಹೈನುಗಾರಿಕೆ

ಕೃಷಿ ಜೊತೆಗೆ ದೀಪ್ತಿ ಅವರು ಹೈನುಗಾರಿಕೆಗೆ ಮುಂದಾಗಿದ್ದಾರೆ. ದೇಶಿ ತಳಿಯ 40 ಹಸುಗಳನ್ನು ಸಾಕಿದ್ದು, ಉತ್ತಮ ಆದಾಯದಲ್ಲಿದ್ದಾರೆ. ಇದರ ಜೊತೆಗೆ ಕೋಳಿ ಸಾಕಾಣಿಕೆ ಅತ್ಯಂತ ಯಶಸ್ವಿಯಾಗಿ ನಡೆಯುತ್ತಿದ್ದು, ನಿರೀಕ್ಷೆಗಿಂತ ಹೆಚ್ಚಿನ ಆದಾಯದಲ್ಲಿದ್ದಾರೆ. ಕೃಷಿಗೆ ಗೊಬ್ಬರವನ್ನು ತಾವೇ ಸ್ವಂತ ತಯಾರಿಸುತ್ತಿದ್ದು, ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಯಶಸ್ಸಿನ ಹೆಜ್ಜೆ ಹಾಕುತ್ತಿದ್ದಾರೆ.

ಸಾಧನೆಗೆ ಪ್ರಶಸ್ತಿ

ಪದವೀಧರೆ ದೀಪ್ತಿ ಅವರು ಸಮಗ್ರ ಕೃಷಿ ಪದ್ಧತಿಯಲ್ಲಿ ಮಾಡಿದ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿ ಬಾಗಲಕೋಟ ತೋಟಗಾರಿಕೆ ವಿಶ್ವವಿದ್ಯಾಲಯ ಕಳೆದ 2021ರಲ್ಲಿ ಶ್ರೇಷ್ಠ ತೋಟಗಾರಿಕೆ ಮಹಿಳಾ ಪ್ರಶಸ್ತಿ ನೀಡಿ ಗೌರವಿಸಿದೆ. ಎಂಬಿಎ, ಬಿಇ ಪದವಿ ಪಡೆದ ಗ್ರಾಮೀಣ ಭಾಗದ ದೀಪ್ತೀ ಅವರು ಸರ್ಕಾರಿ ನೌಕರಿ ತೊರೆದು ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಲು ಮುಂದಾಗಿರುವುದು ಎಲ್ಲರಿಂದ ಉತ್ತಮ ಪ್ರಶಂಸೆ ವ್ಯಕ್ತವಾಗಿದೆ.

ಆನ್‌ಲೈನ್‌ನಲ್ಲಿ ಬುಕ್ ಮಾಡಿದರೆ ಬಯಸಿದ ಮಾವು ಹೋಂ ಡೆಲಿವರಿ

ಮಾವು ನಿಗಮದಿಂದ ಇಂದು ಚಾಲನೆ | ಅಂಚೆ ಇಲಾಖೆ ಮೂಲಕ ಮನೆಗೆ ರವಾನೆ | ರೈತರಿಂದ ನೇರ ಮಾರಾಟ | ರಾಸಾಯನಿಕ ಮುಕ್ತ | ಮಧ್ಯವರ್ತಿಗಳ ಹಾವಳಿ ಇಲ್ಲ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಅಂಚೆ ಮೂಲಕ ನಗರದ ಮಾವು ಪ್ರಿಯರ ಮನೆ ಬಾಗಿಲಿಗೆ ಮಾವಿನ ಹಣ್ಣು ತಲುಪಿಸುವ ಸೌಲಭ್ಯ ಸೋಮವಾರದಿಂದ ಆರಂಭವಾಗಲಿದೆ.

ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ 'ಕಾರ್‌ಸಿರಿ'ಪೋರ್ಟಲ್ ಮೂಲಕ ಗ್ರಾಹಕರು ತಮಗೆ ಬೇಕಾದ ಹಣ್ಣುಗಳಿಗೆ ಬೇಡಿಕೆ ಸಲ್ಲಿಸಿ ಮನೆ ಬಾಗಿಲಿಗೆ ಹಣ್ಣು ತರಿಸಿಕೊಳ್ಳಬಹುದು.

ರಾಸಾಯನಿಕ ಮುಕ್ತ ಮತ್ತು ಮಧ್ಯವರ್ತಿಗಳ ಹಾವಳಿಯಿಲ್ಲದೆ ನೇರವಾಗಿ ಗ್ರಾಹಕರ ಮನೆ ಬಾಗಿಲಿಗೆ ರೈತರಿಂದ ಮಾವಿನ ಹಣ್ಣು ಗ್ರಾಹಕರಿಗೆ ಪೂರೈಕೆಯಾಗಲಿದೆ ಎಂದು ಮಾವು ಮಂಡಳಿಯ ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಗ್ರಾಹಕರು ನಿಗಮದ ವೆಬ್‌ಸೈಟ್‌ಗೆ ಭೇಟಿ ನೀಡಿದಲ್ಲಿ ಅಲ್ಲಿ ನೋಂದಾಯಿತ ರೈತರ ವಿಭಾಗಗಳು ತೆರೆದುಕೊಳ್ಳುತ್ತವೆ. ತಮಗೆ ಬೇಕಾದ ರೈತರ ಹೆಸರಿನ ವಿಭಾಗಕ್ಕೆ ಹೋದರೆ ಮಾವಿನ ಹಣ್ಣಿನ ಫೋಟೋಗಳು ಆಯಾ ತಳಿಯ ಹೆಸರು ಹಾಗೂ ದರ ಕಾಣಿಸಿಕೊಳ್ಳುತ್ತದೆ.



- ಆಚ್ಚುಕಟ್ಟಾಗಿ ಪ್ಯಾಕ್ ಮಾಡಬೇಕು
- ನಿಗದಿತ ಸ್ಥಳಕ್ಕೆ ಮಾವು ತಲುಪಿಸಬೇಕು
- ರೈತರಿಗೆ ಮಾವು ಮಂಡಳಿ ನಿರ್ದೇಶನ

ಗ್ರಾಹಕರು ತಮಗೆ ಬೇಕಾದ ತಳಿಯ ಮಾವಿನ ಹಣ್ಣಿನ ಮೇಲೆ ಕ್ಲಿಕ್ ಮಾಡಿ, ಆನ್‌ಲೈನ್‌ನಲ್ಲೇ ಹಣ ಪಾವತಿಸಬೇಕು (ಅಂಚೆ ಶುಲ್ಕವೂ ಸೇರಿ), ಬುಕ್ ಆದ ಕೂಡಲೇ ಇ-ಮೇಲ್ ಮತ್ತು ಮೊಬೈಲ್ ಮೂಲಕ ಅಂಚೆ ಇಲಾಖೆಗೆ ಹಾಗೂ ರೈತರಿಗೆ ಸಂದೇಶ ರವಾನೆಯಾಗುತ್ತದೆ.

ಕಾರ್‌ಸಿರಿಪೋರ್ಟಲ್‌ನಲ್ಲಿಮಾವನ್ನುಕಾಯ್ದಿರಿಸುವ ಗ್ರಾಹಕರಿಗೆ ರೈತರು ಆಚ್ಚುಕಟ್ಟಾಗಿ ಪ್ಯಾಕ್ ಮಾಡಿಕೊಡಬೇಕು, ಬಾಕ್ಸ್ ಮೇಲೆ ಗ್ರಾಹಕರ ವಿಳಾಸ, ಮೊಬೈಲ್ ಸಂಖ್ಯೆ ಕಡ್ಡಾಯವಾಗಿ ನಮೂದಿಸಬೇಕು, ನಂತರ ನಿಗದಿತ ಸ್ಥಳಕ್ಕೆ ತಲುಪಿಸುವಂತೆ ಅಂಚೆ ಇಲಾಖೆ ಷರತ್ತು ವಿಧಿಸಿದೆ.

ಪೋರ್ಟಲ್ ನಿರ್ವಹಣೆ ಮಾಡುವ ಸಂಬಂಧ ನಿಗಮ ರೈತರಿಂದ ಶೇ.2ರಷ್ಟು ಮೊತ್ತವನ್ನು ಪಡೆಯುತ್ತಿರುವುದಕ್ಕೆ ರೈತರು ವಿರೋಧ ವ್ಯಕ್ತಪಡಿಸಿದ್ದಾರೆ, ಆದರೆ ನಿಗಮ ಪೋರ್ಟಲ್ ನಿರ್ವಹಣೆ, ನಾಲ್ಕು ಪೋನ್‌ಗಳನ್ನು ಬಳಸಬೇಕಾಗುತ್ತದೆ. ಹೀಗಾಗಿ ರೈತರಿಂದ ಪಡೆಯುವ ಶೇ.2ರಷ್ಟು ಮೊತ್ತ ದೊಡ್ಡ ಹೊರೆಯಾಗುವುದಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

16-05-2022 Kp Pg 04

16-05-2022 Times of Ind Pg 02

Years of good work undone as allocation decreases for organic farming

Only Rs 20 crore in budget; many switch back to chemical farming

SHRUTHI H M SASTRY
BENGALURU, DHNS

The Basavaraj Bommai administration has cut budgetary allocation for organic farming this fiscal to Rs 20 crore, the lowest in the last eight years, irking proponents and practitioners of this sustainable mode of agriculture.

Last year, the government had set aside Rs 50 crore for organic farming.

Except for 2020-21, when the money allocated was about Rs 10 crore owing to the pandemic, successive governments have allocated at least Rs 40 crore to develop organic farming in the state.

Final allocation less

Not just this, over the years, while successive governments have been promising grand sums to develop organic farming, the final allocation is disappointing, lamented A S Anand, chairperson of the empowered committee of the State Organic Agriculture Mission.



Even though Karnataka was among the early adopters of organic farming, today states such as Assam and Sikkim are faring better. PIC FOR REPRESENTATION ONLY

For instance, in the 2021-22 budget, former chief minister B S Yediyurappa had announced a Rs 500-crore outlay for organic farming in his budget speech.

Eventually, the budgetary estimates reflected merely Rs 50 crore for organic farming-related programmes.

"Finally, the amount released was just Rs 33 crore and that, too, 15 days prior to the end of the financial year. Of what use is that money?" Anand sought to know.

He said he has given several representations to the CM, seeking increased budgetary allocation.

This decrease in budgetary allocation is pushing Karnataka on the backfoot when it comes to adoption of organic farming, said Jayaprasad, an organic farmer and president of Hassan and Kodagu Regional Cooperative Organic Farmers' Association Federation.

Even though Karnataka was among the early adopters of organic farming, today states such as Assam and Sikkim are faring better.

Infra, marketing suffer

This is because the state didn't follow up with adequate funds, he said. With no funds for basic infrastructure or marketing, farmers are resorting back to chemical farming, he pointed out.

"The government had sanctioned to our federation Rs 50 lakh in 2016. This was released only two months ago. This is the apathy," he lamented.

According to him, each of the 15 organic farmers' federations in the state requires at least Rs 25 lakh of annual funds to get more farmers to grow and market their produce.

'No dip, it's diversification'

However, what may appear as a decrease in allocation is, in fact, diversification of the funds for various sustainable modes of agriculture, according to agriculture commissioner Brijesh Kumar Dikshit.

The government is looking at expanding beyond organic farming into other modes of sustainable agriculture such as natural farming, agro-ecology among others.

Focus on natural farming

"This year, there will be emphasis on natural farming. Nonetheless, this does not mean that we will not focus on organic farming," the official told *DH*.

Karnataka has about 1.7 lakh hectares of land certified as organic cultivation, which is about 2% of the total cultivated land.

The current allocation of Rs 20 crore will be adequate if the government announces additional funding for natural farming or converges various programmes in related departments such as horticulture, for instance, opined N Devakumar, director of extension, GKVK, Bengaluru.

Nonetheless, it's time for the government to focus beyond production of organic crops and look at post-production and marketing, he added.

Soil testing options in schools to enhance experiential learning

CBSE board has a complete skill course in Agriculture that may include soil testing component

Sonal.Srivastava
@timesgroup.com

ISTOCK



Soil testing in schools can be incorporated where students can study porosity, soil formation and permeability

Prime minister Narendra Modi's suggestion to use Science labs in schools for soil testing has been hailed by the educators. The initiative will encourage students in soil conservation campaigns and connect them with ground realities of agricultural challenges faced by the farmers.

While chairing a review meeting on the implementation of NEP 2020, PM Modi suggested that the secondary schools with science labs must engage with the farmers to help them create awareness about the quality and health of the soil through soil testing.

Sanyam Bhardwaj, controller of examinations, CBSE, says that Volumetric analysis, also known as Titration, is a laboratory method of quantitative chemical analysis that is a part of senior classes' Chemistry practical syllabus. "The PM's vision can be brought to life through CBSE schools across the country. We are offering Agriculture as a subject, so wherever students are pursuing this subject, labs can be used for soil testing," says Bhardwaj, adding that before a practical is performed, teachers explain the subject and also show students how to perform it, explain the output and variations to them.

It could also become a part of the syllabus; students can be asked to identify the chemical in the soil; it will also enable experiential learning, adds Bhardwaj. "The CBSE board already has a complete skill course in Agriculture that aims to develop employability and skill competencies of students studying in classes IX and X. This course helps keep students abreast with concepts such as horticulture, seed selection-seedling production, soil preparation and transplanting, etc. The student gets hands-on learning, supported by simulated training, case studies and exposure through practical work.

Undertaking soil testing in a school laboratory setup will ensure benefits at many levels, for farmers it will be an inexpensive option. On the other hand, the students will learn about soil testing as a management tool to determine PH and nutrient concentration, they will also understand the importance of protecting the soil from contamination," says Shalini Bhatt, principal, Podar International School, Vadodara.

Soil study is a popular subject in schools in Australia. "Inclusion of soil study at the school level will add relevance to subjects like Geography, Environment Science. India is an agricultural country and a basic knowledge about soil profile and structure will help create awareness in general leading to a variety of new streams for students to choose from for their careers," says Hina Desai, principal, Birla Open Minds International School, Walkeshwar, Mumbai, pointing out that authorities must look into the syllabus of the subject and the scope of study to do justice to it. "Adequate amount of activities need to be planned to enhance the interest of the school students," she says.

Affiliated with CISCE, Chaman Bhartiya School, in Bengaluru, has an Innovation Lab equipped with soil moisture testing and drip irrigation equipment. "Different soils have different moisture content which accordingly impacts the crops," says Ranjini Sridhar, head, IT, Chaman Bhartiya School, in Bengaluru.

Vol 22, No. 5, RNI No. KARENG/2001/04035. Published

16-05-2022 Times of Ind Pg 04

16-05-2022 Hindu Pg 03

Wheat prices see correction after export ban

STAFF REPORTER
BENGALURU

The Union Government's decision to ban the export of wheat with immediate effect has already had an impact on the soaring wheat prices in Karnataka. Hours after the export ban order, the price of wheat saw a 2% to 3% correction on Saturday, industry insiders said.

3.17% drop

"A kilogram of mill quality wheat delivered in Bengaluru was trading at ₹25.20 on Friday and post the export ban, the price was ₹24.40, a drop by 3.17%," said M. K. Dattaraj, managing director, Krishna Flour Mills, and past president of Roller Flour Millers Federation of India.

He said with the export ban, the price of wheat was expected to see a correction further, which will also impact atta, rava, and other wheat-related products.

Impact of shortage

Exports and the resultant shortages in the domestic market had led to a spike in prices of wheat and related products – on an average around 25% when compared with the prices same time last year – over the last two months.

Impact of war

The Ukraine-Russia war has disrupted global supply chains as both countries were major exporters of wheat and related products to Europe and other western countries. This created a demand for wheat in the global market, triggering exports from India.

"Usually exports from the country were less than 1% of our wheat production. But this year, it has already crossed 15%, creating a shortage in the domestic market. Even the Government of India is unable to find wheat at minimum support price in the market for the public distribution system, triggering an export ban," explained Ramesh Chandra Lahoti, a senior foodgrain merchant and vice- president of the Federation of Karnataka Chambers of Commerce and Industry.

The export ban order came days after the Retail Inflation for April was revealed to be 7.79%, a eight year high.

